







ಟ್ರೆಂಡ್ ಬದಲಾಗಿದೆ. ಅದಕ್ಕೆ ತಕ್ಕಂತೆ ಕಾಲುಂಗುರಗಳೂ ಸಾಕಷ್ಟು ಬದಲಾವಣೆಗಳನ್ನು ಕಂಡಿವೆ. ಚಿನ್ನದ ಕಾಲುಂಗುರಗಳೂ ಈಗ ಚಾಲ್ತಿಯಲ್ಲಿವೆ. ಸಾಮಾನ್ಯವಾಗಿ ಕಾಲುಂಗುರಗಳು ಒಂದು, ಎರಡು ಅಥವಾ ಹಲವು ಸುತ್ತುಗಳನ್ನು ಹೊಂದಿರುತ್ತಿದ್ದವು. ಪುಟ್ಟ ಪುಟ್ಟ ಗೆಜ್ಜೆಗಳಿದ್ದ ಕಾಲುಂಗುರಗಳೂ ಹಲವು ವರ್ಷ ಫ್ಯಾಷನ್ ಆಗಿದ್ದವು. ಆದರೆ ಕಾಲದೊಂದಿಗೆ ಅವುಗಳೂ ಬದಲಾವಣೆಗೆ ಒಳಪಟ್ಟಿವೆ. ಈಗಿನ ಕಾಲುಂಗುರಗಳು ಹಲವು ಬಗೆಯ ವಿನ್ಯಾಸಗಳನ್ನು ಹೊಂದಿವೆ. ಅಲ್ಲದೆ ಅವುಗಳಿಗೆ ವಜ್ರ, ಮುತ್ತು, ಹವಳ ಹಾಗೂ ವಿವಿಧ ಬಗೆಯ ಹರಳುಗಳನ್ನೂ ಕೂಡಿಸಿರುತ್ತಾರೆ.

ಕಾಲುಂಗುರಗಳು ಪಾದದ ಅಂದವನ್ನು ಹೆಚ್ಚಿಸುತ್ತವೆಯಾದರೂ ಅವುಗಳ ಬಳಕೆಯ ಹಿನ್ನೆಲೆಯಲ್ಲಿ ವಿಶೇಷ ಅರ್ಥವಿದೆ. ಹೆಚ್ಚಿನ ಸಂಖ್ಯೆಯ ಹಿಂದೂ ಕುಟುಂಬಗಳಲ್ಲಿ ಕಾಲುಂಗುರವನ್ನು ವಿವಾಹಿತ ಮಹಿಳೆಯರು ಮಾತ್ರ ಧರಿಸುತ್ತಾರೆ. ವರನು ವಧುವಿನ ಬೆರಳುಗಳಿಗೆ ಕಾಲುಂಗುರ ವನ್ನು ತೊಡಿಸುವುದೂ ವಿವಾಹದ ವಿಧಿಗಳಲ್ಲಿ ಒಂದಾಗಿದೆ. ಆಯುರ್ವೇದ ತಜ್ಞರ ಪ್ರಕಾರ ಕಾಲುಂಗುರಗಳನ್ನು ಬಳಸುವುದರಿಂದ ಮಾಸಿಕ ಋತುಚಕ್ರವು ಕ್ರಮಬದ್ಧವಾಗುತ್ತದೆ, ಆ ಸಮಯದಲ್ಲಿ ಕಂಡುಬರುವ ನೋವಿನ ತೀವ್ರತೆಯೂ ಕಡಿಮೆಯಾಗುತ್ತದೆ, ಅಲ್ಲದೆ ಗರ್ಭಧಾರಣೆಯ ಸಾಧ್ಯತೆಯೂ ಹೆಚ್ಚುತ್ತದೆಯಂತೆ.

ಇತ್ತೀಚಿನ ವರ್ಷಗಳಲ್ಲಿ ಅನೇಕ ಪಾಶ್ಚಿಮಾತ್ಯ ದೇಶಗಳಲ್ಲೂ ಕಾಲುಂಗುರ ಜನಪ್ರಿಯವಾಗಿದೆ. ಆದರೆ ಅಲ್ಲಿ ಅವುಗಳನ್ನು ಫ್ಯಾಷನ್‌ಗಾಗಿ ಬಳಸುತ್ತಾರೆಯೇ ವಿನಹ ಅದರ ಹಿನ್ನೆಲೆಯಲ್ಲಿ ಯಾವುದೇ ಧಾರ್ಮಿಕ ಭಾವನೆಗಳಿಲ್ಲ. ಒಟ್ಟಿನಲ್ಲಿ ಕಾಲ್ಗೆಜ್ಜೆ, ಕಾಲುಂಗುರಗಳು ಬೆಳ್ಳಿಯಿಂದ ಮಾಡಿದವು ಕಾಲಿನ ಅಂದ ಇಮ್ಮಡಿಸಲು ಸಹಕಾರಿಯಾಗುತ್ತದೆ. ಇದರೊಂದಿಗೆ ಫ್ಯಾಷನ್ ಕೂಡ ತಳುಕು ಹಾಕಿಕೊಂಡಿದೆ. ಕಾಲುಂಗುರದ ಬಗ್ಗೆ ಸಿನಿಮಾ ಹಾಡುಗಳೂ ಬಂದಿದ್ದು, ಅದರ ಮಹತ್ವವನ್ನು ಹೆಚ್ಚಿಸಲು ಸಹಕಾರಿಯಾಗಿದೆ.